# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\371\2015\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10.1.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಎದುರುದಾರ ನಂ:2 (ಶ್ರೀಮತಿ.ಮಲ್ಲಮ್ಮ, ಅಧ್ಯಕ್ಷರು, ಜೆ.ಅಚ್ಚಮ್ಮನಹಳ್ಳಿ ಗ್ರಾಮ ಪಂಚಾಯ್ತಿ, ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆ) ರವರ ವಿರದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವ ಕುರಿತು.

*******

ಶ್ರೀ.ಬಿ.ಲಿಂಗಪ್ಪ, ಬಿನ್ ಬಜ್ಜಪ್ಪ, ಜೆ.ಅಚ್ಚಮ್ಮನಹಳ್ಳಿ, ವೈ.ಎನ್.ಹೆಚ್.ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ಆರ್.ಲಕ್ಷ್ಮೀಕಾಂತ, ಕಾರ್ಯದರ್ಶಿ, ಗ್ರಾಮ ಪಂಚಾಯ್ತಿ ಕಾರ್ಯಾಲಯ, ಜೆ.ಅಚ್ಚಮ್ಮನಹಳ್ಳಿ ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ (2) ಶ್ರೀಮತಿ.ಮಲ್ಲಮ್ಮ, ಅಧ್ಯಕ್ಷರು, ಜೆ.ಅಚ್ಚಮ್ಮನಹಳ್ಳಿ ಗ್ರಾಮ ಪಂಚಾಯ್ತಿ, ಪಾವಗಡ ತಾಲ್ಲೂಕು ತುಮಕೂರು ಜಿಲ್ಲೆ ಮತ್ತು (3) ಶ್ರೀ.ಟಿ.ಸಿದ್ದಪ್ಪ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯ್ತಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಪಾವಗಾಡ ತಾಲ್ಲೂಕು ಅಚ್ಚಮ್ಮನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ 2013-14ನೇ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಮನೆಗಳ ವಿತರಣೆಯಲ್ಲಿ ಬಾರಿ ಅವ್ಯವಹಾರ ಆಗಿರುತ್ತದೆ.

ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3)ಎದುರುದಾರ ನಂ:1 ರಿಂದ 3 ರವರು ತಮ್ಮ ಆಕ್ಷೇಪಣೆಯಲ್ಲಿ ತಾವು ಯಾವುದೇ ಅಕ್ರಮ ಎಸಗಿರುವುದಿಲ್ಲ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳಿಗೆ ಮನೆ ನೀಡಿದು ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4)ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿದ್ದಾರೆ.

5). ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) “2013–14ನೇ ಸಾಲಿನ ವಸತಿ ಯೋಜನೆಯಡಿಯಲ್ಲಿ ಎದುರುದಾರರು ಬಾರಿ ಅವ್ಯವಹಾರ ಮಾಡಿ ಒಂದೇ ಕುಟುಂಬದ ಜನರಿಗೆ ಆಶ್ರಯ ಯೋಜನೆಯ ಮನೆಗಳನ್ನು ವಿತರಿಸಿದ್ದಾರೆಂದು ಆಪಾದಿಸಿರುತ್ತಾರೆ.

(ಆ)ದೂರುದಾರರು ತಮ್ಮ ದೂರಿನಲ್ಲಿ ಬಿ.ಎನ್. ನಾಗರಾಜ್ ರವರ ಸ್ವಂತ ತಮ್ಮ ವೆಂಕಟೇಶ, ಬೊಮ್ಮಲಿಂಗ ಅವರ ತಮ್ಮಂದಿರ ಹೆಂಡತಿಯರಾದ ಪಾಲಾಕ್ಷಿ ಮತ್ತು ಮಂಜುಳ ಇವರ ಹೆಸರಿನಲ್ಲಿ, ಪ್ಯಾರಿಜಾ ಇವರ ಹೆಸರಿನಲ್ಲಿ ಮನೆ ಪಡೆದು ಬಿ ಎನ್.ನಾಗರಾಜ್ ರವರ ತಂದೆ ಹೆಸರಿನಲ್ಲಿ ಇರುವ ಖಾತೆಯನ್ನು ಪ್ಯಾರಿಜಾನ್ ಇವರಿಗೆ ವರ್ಗಾಹಿಸಿ ಮನೆ ನೀಡಿರುತ್ತಾರೆ.

(ಇ) ಎಸ್. ವೆಂಕಟೇಶ್ ಇತನ ಖಾಸ ಅಣ್ಣ ಬೊಮ್ಮಲಿಂಗನಿಗೆ ಆತನ ಹೆಂಡತಿ ಈಶ್ವರಮ್ಮನವರ ಹೆಸರಿಗೆ, ಈಶ್ವರಮ್ಮನ ಖಾಸ ಅಕ್ಕ ಪಾಲಕ್ಕನ ಹೆಸರಿನಲ್ಲಿ ಹಾಗೂ ಈಕೆಯ ಸೋದರತ್ತೆಯ ಮಗ ಬೊಮ್ಮಯ್ಯನಹೆಸರಿನಲ್ಲಿ ಆಶ್ರಯ ಯೋಜನೆಯ ಮನೆ ಪಡೆದಿರುತ್ತಾರೆ ಅಂತ ಆಪಾದಿಸಿರುತ್ತಾರೆ ಅಂದರೆ ಒಂದೇ ಕುಟುಂಬದಲ್ಲಿ 5–6 ಮನೆಗಳನ್ನು ಪಡೆದಿದ್ದು ಕಂಡುಬರುತ್ತದೆ. ಈ ಬಗ್ಗೆ ಫಲಾನುಭವಿಗಳ ಪಟ್ಟಿಯನ್ನು ನೀಡಿದ್ದು ಅದರಲ್ಲಿ ಕ್ರಮ ಸಂ: 123–136ರವರಗೆ ಒಂದೇ ಕುಟುಂಬದ ಸದಸ್ಯರು ಮನೆ ಪಡೆದ ಬಗ್ಗೆ ಹೆಸರು ನಮೂದಾಗಿರುತ್ತದೆ.

ಈ)ಆಶ್ರಯ ಯೋಜನೆಯ ಮನೆಗಳನ್ನು ನೀಡುವಾಗ ವಸತಿ ರಹಿತ ವ್ಯಕ್ತಿಗಳಿಗೆ ಹಾಗೂ ಒಂದು ಕುಟುಂಬಕ್ಕೆ ಒಂದೇ ಮನೆ ಎಂಬ ನಿಯಮದ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಆದರೆ ಎದುರುದಾರರು ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು ಕಂಡುಬರುತ್ತದೆ. ಆದ್ದರಿಂದ ಎದುರುದಾರರು ತಮ್ಮ ಕರ್ತವ್ಯ ದುರುಪಯೋಗಪಡಿಸಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಉ)ಎದುರುದಾರ ನಂ: 1 ಮತ್ತು 3 ರವರು ಕರ್ತವ್ಯ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಊ)ಎದುರುದಾರ ನಂ:2 ರವರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದು ಇವರು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರಡಿಯಲ್ಲಿ ಸರ್ಕಾರಿ ನೌಕರ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ಇವರಿಗೆ ಕೆ.ಸಿ.ಎಸ್.ಆರ್. ನಿಯಮಗಳು ಅನ್ವಹಿಸುವುದಿಲ್ಲ. ಆದ್ದರಿಂದ ಇವರನ್ನು 12(3) ದಡಿಯಲ್ಲಿ ಕ್ರಮ ಕೈಗೊಳ್ಳುವುದರಿಂದ ಕೈಬಿಡಲಾಗಿದೆ.

6) ಈ ಪ್ರಕರಣದಲ್ಲಿ ಎದುರುದಾರರು ಪ್ಯಾರ ನಂ: (ಆ) ಮತ್ತು (ಇ) ರಲ್ಲಿ ಉಲ್ಲೇಖಿಸಿರು ವ್ಯಕ್ತಿಗಳಿಗೆ ನೀಡಿದ ಆಶ್ರಯ ಯೋಜನೆಯ ಮನೆಗಳನ್ನು ನಿಯಮ ಬಾಹೀರವಾಗಿ ನೀಡಿದ್ದು ಅವುಗಳನ್ನು ಮರಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಪಡೆದು ಈ ಕಾನೂನು ಬಾಹೀರ ಕೃತ್ಯಕ್ಕೆ ಕಾರಣರಾದ ಎದುರುದಾರ ನಂ:2 ರವರ ವಿರದ್ಧು ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುಧು ಅಗತ್ಯವಾಗಿರುತ್ತದೆ. ಓಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ತುಮಕೂರು ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

7) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಮಾನ್ಯ ಉಪಲೋಕಾಯುಕ್ತ-2 ರವರಿಗೆ ತಿಳಿಸಲು ಹೇಳಿದೆ.

Sd/- 10/1/17.

(ನ್ಯಾಯಾಮೂರ್ತಿ ಸುಭಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.